ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ

ಅಕಾಡೆಮಿ ಗೀತೆ

ಹಿನ್ನಲೆ

ಅಕಾಡೆಮಿಯು ವಿಜ್ಞಾನ ಸಂವಹನ, ವಿಜ್ಞಾನ ಶಿಕ್ಷಣ ಮತ್ತು ತಂತ್ರಜ್ಞಾನ ಪ್ರಸರಣದ ಹಾಗೂ ಇನ್ನಿತರೆ ವಿಜ್ಞಾನ ಮತ್ತು ತಂತ್ರಜ್ಞಾನ ಬೆಳವಣಿಗೆಗೆ ಪೂರಕವಾದ ಕಾರ್ಯಕ್ರಮಗಳನ್ನು ರಾಜ್ಯದಾದ್ಯಂತ ನಡೆಸುತ್ತಿದ್ದು, ಈ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಜನಸಾಮಾನ್ಯರಿಗೆ ವಿಜ್ಞಾನ ಮತ್ತು ತಂತ್ರಜ್ಞಾನದ ಮಹತ್ವ ಮತ್ತು ವಿಜ್ಞಾನಿಗಳ ಕೊಡುಗೆಯ ಬಗ್ಗೆ ಜಾಗೃತಿ ಮೂಡಿಸಲು ಒಂದು ವಿಜ್ಞಾನ ಗೀತೆಯನ್ನು ಹೊಂದಲು ತೀರ್ಮಾನಿಸಿ, ಅಕಾಡೆಮಿಯ ಮೊದಲನೇ ಸಮ್ಮೇಳನದಲ್ಲಿ ಖ್ಯಾತ ಸಾಹಿತಿ ಪ್ರೊ. ದೊಡ್ಡರಂಗೇಗೌಡ ರವರು ರಚಿಸಿದ ವಿಜ್ಞಾನ ಗೀತೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಸದರಿ ಗೀತೆಗೆ ಸಂಗೀತ ಸಂಯೋಜನೆ, ಗಾಯನ ಮತ್ತು ಆಡಿಯೋ ರೆಕಾರ್ಡಿಂಗನ್ನು ಖ್ಯಾತ ಹಿನ್ನಲೆ ಗಾಯಕಿ ಶ್ರೀಮತಿ ಎಂ.ಡಿ. ಪಲ್ಲವಿ ರವರ ಮೂಲಕ ನಡೆಸಲಾಗಿದೆ. ಈ ಗೀತೆಗೆ ಸರಳವಾದ ವಿಡಿಯೊ ಸ್ವರೂಪವನ್ನು ನೀಡಿ ಅಕಾಡೆಮಿಯ ಕಾರ್ಯಕ್ರಮಗಳ ಪ್ರಾರಂಭದಲ್ಲಿ ಸಭಿಕರಿಗೆ ಕೇಳಿಸಲು ಮತ್ತು ವೆಬ್ ಸೈಟ್ ನಲ್ಲಿ ಹಾಕಲು ಯೋಜಿಸಲಾಗಿದೆ.

ವಿಡಿಯೊ ಸ್ಕ್ರಿಪ್ಟ್

ಮೊದಲಿಗೆ	• ವಿಧಾನ ಸೌಧ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಲೋಗೋ, ಅಕಾಡೆಮಿ ಲೋಗೋ ಒಂದರ ನಂತರ ಒಂದು ಮೂಡುವುದು
ಜನ ಜೀವನವನು ನೂತನಗೊಳಿಸಿದೆ ಅನುಪಮ ಜ್ಞಾನ-ವಿಜ್ಞಾನ ! ವಿನೂತನ ತಂತ್ರಜ್ಞಾನ ! ಕರುನಾಡನ್ನು ಪ್ರಗತಿಗೆ ನಡೆಸಿದೆ ಇಂದಿನ ಜ್ಞಾನ-ವಿಜ್ಞಾನ ನಮ್ಮ ವ್ಯೋಮ-ವಿಜ್ಞಾನ !	• ಜನಸಾಮಾನ್ಯರು ತಮ್ಮ ದೈನಂದಿಕ ಜೀವನದಲ್ಲಿ ಹಾಗೂ ವಿದ್ಯಾರ್ಥಿಗಳು ಶಿಕ್ಷಣದಲ್ಲಿ ತಂತ್ರಜ್ಞಾನವನ್ನು ಬಳಸುತ್ತಿರುವ ದೃಶ್ಯಗಳು, 2 ರಿಂದ 3 ಸ್ಟಿಲ್ ಚಿತ್ರಗಳು • ಈ ಸ್ಟಿಲ್ ಚಿತ್ರಗಳು ಒಂದೊಂದಾಗಿ ಮೂಡಿ ದೊಡ್ಡದಾಗುತ್ತಾ ಮರೆಯಾಗುವುದು • ಕರ್ನಾಟಕದ ಭೂಪಟವನ್ನು 3ಡಿನಲ್ಲಿ ತೋರಿಸಿ, ಅದರಲ್ಲಿ ಪ್ರಮುಖ ವಿಜ್ಞಾನ ಸಂಸ್ಥೆಗಳ ಹೆಸರು ಮೂಡುವುದು. • ಬ್ಯಾಲಾಳು ಆಂಟೆನಾ ತಿರುಗುತ್ತಿರುವ ವಿಡಿಯೋ ತುಣುಕು • ಇಸ್ರೊ ಸಂಸ್ಥೆಯ ಚಿತ್ರ, ಶ್ರೀಹರಿಕೊಟದಿಂದ ಇಸ್ರೊ ಉಪಗ್ರಹ ಉಡವಣೆ • ಚಂದ್ರಯಾನದ ಉಪಗ್ರಹದ ಚಿತ್ರ ಅಥವಾ ವಿಡಿಯೊ ತುಣುಕು
ಯುಗ ಯುಗ ಈ ಜಗ ಹೇಗೆಂಬ ಚಿಂತನೆ ಹೊಸ ಅಧ್ಯಯನಕೆ ಪ್ರೇರಣೆ ತಂತ್ರಜ್ಞಾನದ ಶೋಧನೆ !	• ನಗರದ ಸಮಸ್ಯೆಗಳು (ವಾಹನ ದಟ್ಟಣೆ, ತ್ಯಾಜ್ಯ, ಕೋವಿಡ್19, ಜನಸಂದಣಿ) ಮತ್ತು ಹಳ್ಳಿಗಳ ಸಮಸ್ಯೆಗಳು (ಪ್ರವಾಹ, ಬರ, ಬೆಳೆ ನಾಶ) ಚಿತ್ರಗಳು

ಮಾನವ ಚರಿತೆಗೆ ಜ್ಞಾನದ ಬೋಧನೆ ವಿಜ್ಞಾನದ ಅನ್ವಯ ಧಾರಣೆ ಸಕಲ ಜೀವಿಗಳ ಸಂರಕ್ಷಣೆ !	• ಸಮಸ್ಯಗಳ ನಿವಾರಣೆ ತೋರಿಸುವ 2 ರಿಂದ 3 ಚಿತ್ರಗಳು • ಅರಣ್ಯ, ಪರಿಸರ (ಕುದುರೇಮುಖ/ಪಶ್ಚಿಮ ಘಟ್ಟ), ಜೀವರಾಶಿಯನ್ನು ತೋರಿಸುವ ಚಿತ್ರ / ವಿಡಿಯೋ ತುಣುಕು
ಜ್ಞಾನವೇ ಶೋಧನೆ ! ಜ್ಞಾನವೇ ಸಾಧನೆ ಜ್ಞಾನ-ವಿಜ್ಞಾನ ಸಂವರ್ಧನೆ ಜ್ಞಾನವೇ ರಂಜನೆ ಜ್ಞಾನವೇ ಪ್ರೇರಣೆ ನಿರ್ಮಲ ಬಾಳ ಉದ್ದೀಪನೆ !	• ದೇಶದ ಪ್ರಮುಖ ವಿಜ್ಞಾನಿಗಳ ಚಿತ್ರಗಳು ಮೂಡುವುದು
ಅನುದಿನ ಅನುಕ್ಷಣ ಹೊಸ ಅನ್ವೇಷಣೆ ಭಾರತದ ಸಿರಿ ಸಾಧನೆ ಶಾಂತಿ – ಪ್ರೀತಿ – ಸಂವರ್ಧನೆ ! ಕೃಷಿ ಕೈಗಾರಿಕೆ ಕಂಡು ಸಂಶೋಧನೆ ನಾಡ ಮುನ್ನಡೆಯ ನಿಶಾನೆ ನಾವೆಲ್ಲ ಒಂದೆಂಬ ಭಾವನೆ !	• ಜನಸಾಮಾನ್ಯರು ತಯಾರಿಸಿದ ತಂತ್ರಜ್ಞಾನ ಅಭಿವೃದ್ಧಿ ಚಿತ್ರಗಳು • ಐ.ಐ.ಎಸ್.ಸಿ., ಡಿ.ಆರ್.ಡಿ.ಓ., ಸಿ.ಎಫ್.ಟಿ.ಆರ್.ಐ, ಮೈಸೂರು ವಿಶ್ವವಿದ್ಯಾಲಯದ ಕ್ರಾಫೋರ್ಡ್ ಹಾಲ್, ಸೆಂಟ್ರಲ್ ಕಾಲೇಜು, ಯುವಿಸಿಇ, ಸಂಸ್ಥೆಗಳ ಚಿತ್ರಗಳು • ವಿಜ್ಞಾನ, ತಂತ್ರಜ್ಞಾನ ಮತ್ತು ಶಾಂತಿ ಸಂಕೇತ ತೋರಿಸುವ ಚಿತ್ರ • ಟಿಶ್ಯು ಕಲ್ಚರ್, ರೈತ ಉತ್ಪಾದಕ ಸಂಸ್ಥೆ, ಇತರೆ ರೈತ ಸಂಸ್ಥೆಗಳ ಚಿತ್ರಗಳು • ಹಸಿರು ಕ್ರಾಂತಿ, ಕ್ಷೀರ ಕ್ರಾಂತಿ ಚಿತ್ರಗಳು • ಒಗ್ಗಟ್ಟಿನ ಸಂಕೇತದ ಚಿತ್ರ
ಜ್ಞಾನವೇ ಶೋಧನೆ ; ಜ್ಞಾನವೇ ಸಾಧನೆ ಜ್ಞಾನ-ವಿಜ್ಞಾನ ಸಂವರ್ಧನೆ ಜ್ಞಾನವೇ ರಂಜನೆ ; ಜ್ಞಾನವೇ ಪ್ರೇರಣೆ ನಿರ್ಮಲ ಬಾಳ ಉದ್ದೀಪನೆ !	• ದೇಶದ ಪ್ರಮುಖ ವಿಜ್ಞಾನಿಗಳು ಮತ್ತು ಪ್ರಮುಖ ಉದ್ಯಮಿಗಳ ಚಿತ್ರಗಳು ಮೂಡುವುದು
ಕೊನೆಯಲ್ಲಿ	• ವಿಷನ್: ಸರ್ವರ ಬದುಕಿಗಾಗಿ ಜ್ಞಾನ-ವಿಜ್ಞಾನ-ತಂತ್ರಜ್ಞಾನದ ಬೆಳಕು • ಮಿಷನ್: ಸಮಾಜದ ಕಲ್ಯಾಣಕ್ಕಾಗಿ ವಿಜ್ಞಾನ ಪ್ರೋತ್ಸಾಹ, ತಂತ್ರಜ್ಞಾನ ಪ್ರಸರಣ ಮತ್ತು ಆವಿಷ್ಕಾರಗಳನ್ನು ಪೋಷಿಸುವಲ್ಲಿ ಪ್ರಮುಖ ಪಾತ್ರ